ಮಾನ್ಯ ಮುಲ್ಲಾರಿಗೌಡರು ಟೆಕ್ನಿಕಲ್ ಎಕ್ಸ್‌ಪರ್ಟ್ ಆಗಿದ್ದರೆ ಅವರು ಹೇಳುವ ಮಾತನ್ನು ಒಪ್ಪುತ್ತಿದ್ದೆ. ಆದರೆ ನಾವು ಯೋಚನೆ ಮಾಡಿ ಎಕ್ಸ್‌ಪರ್ಟ್‌ಗಳಿಂದ ಎಕ್ಸಾಮಿನ್ ಮಾಡಿಸಿದಾಗ ಒಂದು ವರ್ಷದಲ್ಲಿ ಕೇವಲ ೧೦-೧೨ ದಿನಗಳು ಮಾತ್ರ ಪವರ್ ಸ್ಟೇಷನ್ ನಡೆಸುವುದಕ್ಕೆ ಸಾಧ್ಯ ಎಂದು ತಿಳಿದುಬಂದಿದೆ. ಆದರ ಬಗ್ಗೆ ಚೆನ್ನಾಗಿ ಗೊತ್ತಿರತಕ್ಕವರು ಹೇಳಿರತಕ್ಕ ಮಾತು ಇದು. ಯಾವುದೇ ಕಾರಣದಿಂದ it is not economically viable. Secondly, a power station which is installed, if it can run only for two months in a year, no power station will be able to sustain its economics. ಆದ್ದರಿಂದ ಮಾನ್ಯ ಸದಸ್ಯರು ಸಲಹೆ ಮಾಡಿರುವ ಹಾಗೆ ಬೆಳಗಾಂ ಜಿಲ್ಲೆಗೆ ಹೋದಾಗ ನಾನು ಮತ್ತು ಅವರು ಸ್ಥಳವನ್ನು ನೋಡುತ್ತೇವೆ.

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಮಂತ್ರಿಮಂಡಲದಲ್ಲಿ ಮೇಲಿಂದ ಮೇಲೆ ಬದಲಾವಣೆಯಾಗುತ್ತಿರುತ್ತದೆ. ಆದ್ದರಿಂದ ತಾವು ಮಂತ್ರಿಗಳಾಗಿದಾ ಗಲೇ ಬಂದು ನೋಡಿ ಎಂದು ಆಗ್ರಹಪಡಿಸುತ್ತೇನೆ. ನಾನು ೨ ಸಿ ಸಾರಿ ಈ ಪ್ರಶ್ನೆಯನ್ನು ಪಾಕಿದ್ದೇನೆ. ನಾನು ಟೆಕ್ನಿಕಲ್ ಎಕ್ಸ್‌ಪರ್ಟ್ ಅಲ್ಲದೆ ಇರಬಹುದು. ಆದರೂ ನನ್ನ ಅನುಭವದ ಮೇಲೆ ಹೇಳುತ್ತೇನೆ. ಘಟಪ್ರಭಾ ಅಣೆಕಟ್ಟಿನಲ್ಲಿ ಕಳೆದ ೨-೩ ವರ್ಷಗಳಲ್ಲಿ ನೀರು ಇರಲಿಲ್ಲ. ಈಗ ನೀರು ತುಂಬಿದೆ. ೩೦ ಮೆಗಾವ್ಯಾಟಿನ ಜನರೇಟಿಂಗ್ ಸ್ಟೇಷನ್ ಮಾಡುತ್ತಿದ್ದಾರೆ. ಆದರ ಕೆಳಗಡೆ ಇದು ಬರುವುದರಿಂದ ಅಲ್ಲಿ ಬಿಡುವ ನೀರನ್ನು ಉಪಯೋಗ ಮಾಡಬಹುದು. ಆದ್ದರಿಂದ ದಯಮಾಡಿ ಇದನ್ನು ತಾವು ಪರಿಶೀಲಿಸಬೇಕು. ತಾವು ಖುದ್ದಾಗಿ ಬರುವುದಾಗಿ ಹೇಳಿದಿರಿ, ಈ ತಿಂಗಳು ಅಥವಾ ಮುಂದಿನ ತಿಂಗಳೊಳಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಜೆ. ಹೆಚ್. ಪಟೇಲ್. ಇದರಲ್ಲಿ ಯಾವುದೇ ಪ್ರಿಜುಡೀಸ್ ಇಲ್ಲ. We would like to exploit power potential anywhere in any place we can generate power. But this has already been examined by the experts. Still I will go with him to that place and re-examine.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಮತ್ತು ಸಕ್ಕರೆ ಉತ್ಪಾದನೆ.

೨೮೭೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳು ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ (ಖಾಸಗಿ ಸಹಕಾರಿ ಮತ್ತು ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು—ಪ್ರತ್ಯೇಕ ಮಾಹಿತಿ)

ಆ) ಅವುಗಳ ಪೈಕಿ ಮುಚ್ಚಲಾಗಿರುವ ಕಾರ್ಖಾನೆಗಳು ಎಷ್ಟು ?

ಇ) ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದಲೂ ಪ್ರತಿ ತಿಂಗಳೂ ಮತ್ತು ಪ್ರತಿ ವರ್ಷ ಉತ್ಪಾದಿಸಲಾಗುವ ಒಟ್ಟು ಸಕ್ಕರೆ ಎಷ್ಟು ?

ಈ) ಪ್ರತಿ ಟನ್ ಕಬ್ಬಿಗೆ ಸರ್ಕಾರ ನಿಗದಿಪಡಿಸಿರುವ ದರವೇನು ?

ಉ) ಕಾರ್ಖಾನೆಯಿಂದ ಕಾರ್ಖಾನೆಗೆ ದರಗಳಲ್ಲಿ ವ್ಯತ್ಯಾಸವಿದೆಯೇ ?

ಶ್ರೀ ಜೆ ಹೆಚ್. ಪಟೇಲ್ (ಭಾರಿ ಮಧ್ಯಮ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ರಾಜ್ಯದಲ್ಲಿ ಸಹಕಾರಿ, ಖಾಸಗಿ ಮತ್ತು ಇನ್ನಿತರ ವಲಯಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಸಂಖ್ಯೆಯ ಬಗೆ ಮಾಹಿತಿ ಈ ಕೆಳಕಂಡಂತೆ ಇದೆ.

೧) ಸಹಕಾರಿ ವಲಯ :	೧೪
೨) ಖಾಸಗಿ ವಲಯ :	೭
೩) ಜಂಟಿ ವಲಯ :	೪

ಕಾರ್ಯಗತ ಮಾಡದೇ ಇರುವ ಕಾರ್ಖಾನೆಗಳು :

೧) ಸಹಕಾರಿ ವಲಯ : ೧
೨) ಖಾಸಗಿ ವಲಯ : ೧
೩) ಜಂಟಿ ವಲಯ :

ಹೊಸದಾಗಿ ಸ್ಥಾಪಿತವಾಗುತ್ತಿರುವ ಕಾರ್ಖಾನೆಗಳು :

ಸಹಕಾರಿ ವಲಯ : ೨

ಆ) ಮುಚ್ಚಲ್ಪಟ್ಟಿರುವ ಸಕ್ಕರೆ ಕಾರ್ಖಾನೆಗಳು

ಅ) ಸಹಕಾರಿ ವಲಯ : ೧
ಆ) ಖಾಸಗಿ ವಲಯ : ೨

೪) ಸಕ್ಕರೆ ಕಾರ್ಖಾನೆಗಳು ವರ್ಷ ಪೂರ್ತಿ ಕೆಲಸ ಮಾಡುವುದಿಲ್ಲ. ಸಕ್ಕರೆ ಉದ್ಯಮವು ಕಾಲಿಕವಾಗಿದೆ. ಕೆಲವು ಕಾರ್ಖಾನೆಗಳು ಜೂನ್ ಮತ್ತು ಜುಲೈನಲ್ಲಿ ಪ್ರಾರಂಭಿಸಿದರೆ ಕೆಲವು ಕಾರ್ಖಾನೆಗಳು ಕ್ರಮವಾಗಿ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಕಾರ್ಯಾರಂಭಮಾಡುತ್ತವೆ. ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಸಕ್ಕರೆ ವರ್ಷವಾದ ೧೯೮೭-೮೮ನೇ ಸಾಲಿನ (ದಿನಾಂಕ ೧-೧೦-೧೯೮೭ ರಿಂದ ೩೦-೯-೧೯೮೮) ೩೧-೮-೧೯೮೮ ರವರೆಗೆ ಒಟ್ಟು ೭.೧೭ ಲಕ್ಷ ಮೆ.ಟನ್ ಸಕ್ಕರೆಯನ್ನು ತಯಾರಿಸಿದೆ.

ಇದೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಅಕ್ಟೋಬರ್ ೧೯೮೭ ರಿಂದ ಮಾರ್ಚ್ ೧೯೮೮ ರವರೆಗೆ ಪ್ರತಿ ತಿಂಗಳೂ ಸರಾಸರಿ ಒಂದು ಲಕ್ಷ ಮೆ.ಟನ್. ಸಕ್ಕರೆಯನ್ನು ಉತ್ಪಾದಿಸಿದೆ.

೫) ಕಬ್ಬು ಸರಬರಾಜುದಾರರಿಗೆ ಕಾರ್ಖಾನೆಗಳು ಕೊಡಬೇಕಾದ ದರದ ಬಗ್ಗೆ ಭಾರತ ಸರ್ಕಾರವು ಶಾಸನ ಬದ್ಧವಾಗಿ ಪ್ರಕಟಿಸಿದ ಕಬ್ಬಿನ ಬೆಲೆ :

೧೯೮೭-೮೮ (ಪ್ರತಿ ಟನ್‌ಗೆ)	೧೯೮೮-೮೯
ರೂ. ೧೮೫-೦೦	ರೂ ೨೦೫-೦೦

(ಶೇ. ೮.೫ ರಿಕವರಿಯುಳ್ಳ ಕಬ್ಬಿಗೆ) ರಾಜ್ಯ ಸರ್ಕಾರವು ಸೂಚಿಸಿರುವ ಕಬ್ಬಿನ ಸಲಹಾ ಬೆಲೆ :

ರೂ. ೧೯೦-೦೦ ರೂ. ೨೧೫-೦೦

(ಶೇ. ೮.೫ ರಿಕವರಿಯುಳ್ಳ ಕಬ್ಬಿಗೆ)

ಆದರೂ ಕಾರ್ಖಾನೆಗಳು ಕಳೆದ ವರ್ಷ ನೀಡಿದ ಕಬ್ಬಿನ ದರಕ್ಕಿಂತ ಪ್ರತಿ ಟನ್‌ಗೆ ರೂ. ೧೦-೦೦ನ್ನು ಅಧಿಕವಾಗಿ ಪಾವತಿಸಬಹುದೆಂದು ಸೂಚಿಸಲಾಗಿದೆ. ಈ ರೀತಿ ಸೂಚಿಸಿದ ಕಬ್ಬಿನ ಬೆಲೆಯಲ್ಲಿ ರೈತರಿಗೆ ನೀಡಿದ ಖರೀದಿ ತೆರಿಗೆ ಸಬ್ಸಿಡಿಯಾದ ರೂ. ೧೨-೦೦ ಸೇರಿಕೊಂಡಿರುತ್ತದೆ. ೧೯೮೭-೮೮ನೇ ಸಾಲಿನಲ್ಲಿ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ. ೨೭೫-೦೦ನ್ನು ಮತ್ತು ೧೯೮೮-೮೯ನೇ ಸಾಲಿನಲ್ಲಿ ಪ್ರತಿ ಟನ್‌ಗೆ ರೂ. ೨೮೫-೮೦ನ್ನು ಸಕ್ಕರೆ ಇಳುವರಿಯನ್ನು ಗಣನೆಗೆ ತೆಗೆದುಕೊಳ್ಳದೆ ಪಾವತಿಸಬಹುದೆಂದು ಸಲಹೆ ನೀಡಿದೆ.

೬) ಸರ್ಕಾರ ನಿಗದಿಪಡಿಸಿರುವ ಕಬ್ಬಿನ ಬೆಲೆ ಶೇ. ೮.೫ ಸಕ್ಕರೆ ಇಳುವರಿಯುಳ್ಳ ಕಬ್ಬಿಗೆ ನಿಗದಿಯಾಗುವುದರಿಂದ ಮತ್ತು ಸಕ್ಕರೆ ಇಳುವರಿ ಕಾರ್ಖಾನೆಯಿಂದ ಕಾರ್ಖಾನೆಗೆ ವ್ಯತ್ಯಾಸವಾಗುವುದರಿಂದ ಕಬ್ಬಿನ ದರದಲ್ಲಿಯೂ ವ್ಯತ್ಯಾಸವಿರುತ್ತದೆ. ಇದಲ್ಲದೆ ಕಾರ್ಖಾನೆಗಳು ಉತ್ತಮ ಲಾಭಗಳಿಸುತ್ತಿರುವುದು, ಉನ್ನತ ಹಣಕಾಸು ಸಂಸ್ಥೆಗಳಿಗೆ ತೀರಿಸಬೇಕಾಗಿರುವ ಸಾಲ ಮತ್ತು ಅದರ ಮೇಲಿನ ಬಡ್ಡಿ ಮತ್ತು ಸಮೀಪದಲ್ಲಿ ಮತ್ತು ದೂರ ರಾಜ್ಯಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿರುವ ಪರಿಸ್ಥಿತಿಯೂ ಕಬ್ಬಿನ ದರದಲ್ಲಿ ಕಾರ್ಖಾನೆಯಿಂದ ಕಾರ್ಖಾನೆಗೆ ವ್ಯತ್ಯಾಸ ಬರಲು ಕಾರಣವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ. — ಸನ್ಮಾನ್ಯ ಅಧ್ಯಕ್ಷರೇ, ಅವರ ಲೆಕ್ಕದ ಪ್ರಕಾರ ನಾಲ್ಕು ಕಾರ್ಖಾನೆಗಳನ್ನು ಇನ್ನೂ ತೆಗೆದಿಲ್ಲ. ಅದನ್ನು ತೆಗೆದು ಆಲ್ಲಿರುವ ರೈತರಿಗೆ ಯಾವ ಸಹಾಯ ಮಾಡುತ್ತೀರಿ? ಹೊಸದಾಗಿ ಸ್ಥಾಪಿತವಾಗುತ್ತಿರುವ ಕಾರ್ಖಾನೆಗಳು ಎರಡು ಎಂದು ಹೇಳಿದ್ದೀರಿ. ಅದನ್ನು

ತೆಗೆಯುವ ಬಗ್ಗೆ ಸಾಧಾರಣವಾಗಿ ಒಂದು ವರ್ಷದಿಂದ ಇವತ್ತು ನಾಳೆ ಏಂದಂ ಮುಂದಕ್ಕೆ ತಳ್ಳುತ್ತಿದ್ದಾರೆ. ಅದನ್ನು ಯಾವಾಗ ತೆಗೆಯುತ್ತೀರಿ? ಇನ್ನೊಂದಂ ಮುಖ್ಯವಾದ ಪ್ರಶ್ನೆ ಸ್ವಾಮಿ. ಕಬ್ಬಿಗೆ ಒಂದು ಟನ್‌ಗೆ ೨೮೫ ರೂಪಾಯಿ ಕೊಡಿ ಎಂದು ಇವರಂ ಸಲಪೆ ಮಾಡಿದ್ದಾರೆ. ಖಾಸಗಿ ಸಕ್ಕರೆ ಕಾರ್ಖಾನೆಗಳು ೩೫೦ ರೂಪಾಯಿ ಕೊಡುವುದರ ಜೊತೆಗೆ ಸಾರಿಗೆ ವ್ಯವಸ್ಥೆ ಎಂದು ೫೦ ರೂಪಾಯಿ ಕೊಟ್ಟು ಒಟ್ಟು ೪೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇವರು ೨೮೫ ರೂಪಾಯಿಗಳನ್ನು ಕೊಡುವುದರಿಂದ ರೈತರಿಗೆ ಮೋಸ ಮಾಡಿದಂತಾಗುವುದಿಲ್ಲವೆ? ಇವರು ೪೦೦ ರೂಪಾಯಿ ಕೊಡುವುದಕ್ಕೆ ಪ್ರಯತ್ನ ಪಾಡುತ್ತಾರಾ? ಓಪನ್ ಮಾರ್ಕೆಟ್‌ನಲ್ಲಿ ಸಕ್ಕರೆ ೭೦೦ ರೂಪಾಯಿ ಒಂದು ಕ್ವಿಂಟಾಲ್‌ಗೆ ಇದೆ. ೩೦೦ ರೂಪಾಯಿಗಳನ್ನು ಮಧ್ಯಸ್ತಿಕೆದಾರರಿಗೆ ಮತ್ತು ಸಕ್ಕರೆ ತಯಾರು ಮಾಡುವ ಖರ್ಚಿಗೆ ತೆಗೆದುಕೊಳ್ಳುತ್ತಿದ್ದಾರೆ. ಖಾಸಗಿ ವಲಯದಲ್ಲಿ ಒಂದು ಟನ್‌ಗೆ ೩೫೫—೫೦ ರೂಪಾಯಿ ಕೊಡುತ್ತಿರುವುದರಿಂದ ದಯವಿಟ್ಟು ತಾವೂ ಜಾಸ್ತಿ ಮಾಡುವುದಕ್ಕೆ ಒಪ್ಪುತ್ತೀರಾ? ಇಲ್ಲದಿದ್ದರೆ ತೆರಿಗೆ ಅನ್ಯಾಯ ಮಾಡಿದಂತಾಗುತ್ತದೆ ದಯವಿಟ್ಟು ಇದನ್ನು ಪರಿಶೀಲಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೀಲ್.—ಮುಚ್ಚಿದ ಕಾರ್ಖಾನೆಗಳನ್ನು ಯಾವಾಗ ಓಪನ್ ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಮುಚ್ಚಿರುವ ಕಾರ್ಖಾನೆಗಳು ಓಪನ್ ಮಾಡುವ ಸ್ಥಿತಿಯಲ್ಲಿ ಇಲ್ಲ. ಒಂದು ಖಾಸಗಿ ವಲಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಯವರು ಈಗಾಗಲೇ ಮುಚ್ಚಿ ಕೊಂಡು ಹೋಗಿದ್ದಾರೆ. ಮತ್ತೆ ವಾಣಿ ವಿಲಾಸ ಸಕ್ಕರೆ ಕಾರ್ಖಾನೆಗೆ ಕಬ್ಬು ಸಪ್ಲೈಯಾಗುವ ಸ್ಥಿತಿ ಇಲ್ಲದೇ ಇರುವುದರಿಂದ ಅದನ್ನು ಓಪನ್ ಮಾಡುವ ಪಾಸಿಬಿಲಿಟಿ ಇಲ್ಲ. ಮತ್ತೆ ಬೆಲೆಯ ಬಗ್ಗೆ ಮಾನ್ಯ ಸದಸ್ಯರು ರೈತರಿಗೆ ೪೦೦ ರೂಪಾಯಿಗಳನ್ನು ಕೊಡಿಸಬೇಕು ಎಂದು ಹೇಳಿದ್ದಾರೆ. ನಾನು ಈಗಾಗಲೇ ಹೇಳಿದ್ದೇನೆ. ಸಂಕೇಶ್ವರ ಸಹಕಾರಿ ಸಕ್ಕರೆಯಲ್ಲಿ ಮಾತ್ರ ಯಾವುದೇ ಬಡ್ಡಿಯ ಭಾರ ಇಲ್ಲ. ಬೇರೆ ಕಾರ್ಖಾನೆಗಳಿಗಿಂತ ಹೆಚ್ಚು ಜವಾಬ್ದಾರಿಯಿಂದ ಅದನ್ನು ಮ್ಯಾನೇಜ್ ಮಾಡುತ್ತಿದ್ದಾರೆ ಅವರು ಬೇರೆ ರೀತಿಯ ತೆರಿಗೆ ಕೊಡುವುದನ್ನು ರೈತರಿಗೆ ಪಾಸಾನ್ ಮಾಡುತ್ತಿದ್ದಾರೆ. ಅವರು ಮಾತ್ರ ರೈತರಿಗೆ ೪೦೦ ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯ. ಆದರೆ ಬೇರೆ ಕಾರ್ಖಾನೆಗಳಿಗೆ ಈಗಾಗಲೇ we have State Advised Price. We cannot impose a price on any factory that is why. what we do is, ಕೇಂದ್ರ ಸರ್ಕಾರದವರು ಅವರು ಒಂದು ಬೆಲೆಯನ್ನು ನಿಗದಿ ಮಾಡುತ್ತಾರೆ, ಅದಕ್ಕಿಂತ ೧೦ ರೂ. ಜಾಸ್ತಿ State Advised Price ಎಂದು ಕೊಡುವುದಾಗಿ ಹೇಳಿದ್ದೇವೆ. We do not fix price. We cannot fix price. ಆದ್ದರಿಂದ ಮಾನ್ಯ ಸದಸ್ಯರ ಆಸೆ ಏನು ೪೦೦ ರೂಪಾಯಿಗಳನ್ನು ಕೊಡಿಸಬೇಕು ಅಂತ ಇದೆ, ಆದರೆ ಬಗ್ಗೆ ಶಕ್ತಿ ಇರುವಂತಹ ಸಕ್ಕರೆ ಕಾರ್ಖಾನೆಗಳಿಗೆ ಕೊಡಿ, ಅಂತ ಹೇಳಿದ್ದೇವೆ, ಆದರೆ ಬಹುತ್ಪೇಕ ಸಕ್ಕರೆ ಕಾರ್ಖಾನೆಗಳು ತಾವು ಮಾಡಿರುವಂತಹ ಸಾಲಕ್ಕೆ ಬಡ್ಡಿಯನ್ನು ಕೊಡುವ ಶಕ್ತಿಯಲ್ಲಿಲ್ಲ. ಇಂತಹ ಕಾರ್ಖಾನೆಗಳಿಗೂ ರೈತರ ಹಿತರಕ್ಷಣೆ ಮಾಡುವುದಕ್ಕೋಸ್ಕರ ಆ ರೀತಿಯ ಬೆಲೆಯನ್ನು ಕೊಡಿ ಅಂತ ಹೇಳುವುದಕ್ಕೆ ಹೇಗೆ ಸಾಧ್ಯ? ನಾನೂ ಸ್ವತಃ ಕಬ್ಬು ಬೆಳೆಯುತ್ತೇನೆ. ನನಗೂ ಬೇಕು ೮೦೦ ರೂಪಾಯಿ ಕೊಟ್ಟರೆ ಬಹಳ ಸಂತೋಷ ಆದಕ್ಕೆ ಸಕ್ಕರೆ ಕಾರ್ಖಾನೆಗಳು ಉಳಿಯಬೇಕಲ್ಲಾ ನಾವೇನಾದರೂ ಹೆಚ್ಚಿನ ಬೆಲೆಯನ್ನು ರೈತರಿಗೆ ಕೊಡಿಸಬೇಕೆಂಬ ಉತ್ಸಾಹದಿಂದ ಒಂದು ವರ್ಷ ಏನಾದರೂ ಈ ತರಹ ದರವನ್ನು ಕೊಡಿ ಅಂತ ಹೇಳಿದರೆ, ಆ ಕಾರ್ಖಾನೆ ಮುಂದಿನ ವರ್ಷ ಕ್ಲೋಸ್ ಆಗುತ್ತದೆ. ಒಂದು ಉದ್ಯಮವೂ ಇರಬೇಕು. ರೈತರಿಗೂ ಸಹಾಯವಾಗಬೇಕು. ಕೆಲವು ಕಡೆ ೨೮೦ ರೂ. ಇರಬಹುದು. ಕೆಲವು ಕಡೆ ೩೦೦ ರೂಪಾಯಿಗಳು ಇರಬಹುದು. ಸಂಕೇಶ್ವರ ಸಕ್ಕರೆ ಕಾರ್ಖಾನೆಯವರು ೪೦೦ ರೂಪಾಯಿಗಳನ್ನು ರೈತರಿಗೆ ಕೊಡುತ್ತಿರಬಹುದು.

ಶ್ರೀ ಆರ್. ಪಂಕಟರಾಮಯ್ಯ.—ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ, ಅವರೂ ಕೂಡ ಕಬ್ಬು ಬೆಳೆಯುವವರು ಅಂತ. ಸಕ್ಕರೆಯ ಬೆಲೆಯನ್ನು ವಿಪರೀತ ಜಾಸ್ತಿ ಮಾಡಿದ್ದಾರೆ. ಇವತ್ತು ೭೦೦ ರೂಪಾಯಿಗಳು ಇದೆ. ಸಕ್ಕರೆ ಕಾರ್ಖಾನೆಯವರು ರೈತರು ತರುವ ಕಬ್ಬಿನಲ್ಲಿ ಸಕ್ಕರೆ ಪ್ರಮಾಣ (ಸಂಕ್ರೋಸ್) ೧೮.೫ ಪರ್ಸೆಂಟ್ ಇದ್ದರೆ ಅಂತಹವರಿಗೆ ೨೮೦ ರೂಪಾಯಿಗಳನ್ನು ಕೊಡುತ್ತಿದ್ದಾರೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಕಬ್ಬಿನಲ್ಲಿ ಸಕ್ಕರೆ ಪ್ರಮಾಣ, ೧೧ ಪರ್ಸೆಂಟ್ ೧೦ ಪರ್ಸೆಂಟ್ ಇದ್ದರೂ ಅದನ್ನು ಅನುಸರಿಸಿ ಹೆಚ್ಚು ಕೊಡುತ್ತಿಲ್ಲಿ. ಸಂಕೇಶ್ವರ ಸಕ್ಕರೆ

ಕಾರ್ಖಾನೆಯವರು ೩೫೦ ರೂಪಾಯಿಗಳು ಹಾಗೂ ಸಾಗಾಣಿಕೆ ವೆಚ್ಚ ೫೦ ರೂಪಾಯಿಗಳೆಂದು ಒಟ್ಟು ೪೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ ಆದರೆ ಬೇರೆ ಕಡೆ ೨೮೫ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಯಾವ ನ್ಯಾಯ? ಒಂದು ಬೆಲೆಯನ್ನು ನಿಗದಿ ಮಾಡಿದರೆ ಆದನ್ನೇ ಎಲ್ಲ ಕಡೆ ಕೊಡುವಂತಿರಬೇಕು. ಆದ್ದರಿಂದ ಇದನ್ನು ಏಕೆ ರೈಸ್ ಮಾಡಬಾರದು? ರೈತರಿಗೆ ನ್ಯಾಯವಾದ ಬೆಲೆಯನ್ನು ಕೊಡುತ್ತೇವೆಂದು ಸ್ವತಃ ಸರ್ಕಾರವೇ ಒಪ್ಪಿಕೊಂಡಿದೆ ಸಕ್ಕರೆ ಬೆಲೆಯೂ ಕೂಡ ಜಾಸ್ತಿಯಾಗಿದೆ. ಆದ್ದರಿಂದ ೮೫ ಪ್ಲಸ್ ೧೦ ರೂಪಾಯಿ ಅಂತ ಏನು ನಿಗದಿ ಮಾಡಿದ್ದೀರಿ, ಅದನ್ನು ಪುನಃ ಪರಿಶೀಲಿಸಬೇಕು. ಸಕ್ಕರೆ ಕಾರ್ಖಾನೆಯಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ಏನು ಇದೆ, ಅದನ್ನು ತಡೆಗಟ್ಟಿದ್ದರೆ ನಿಜವಾಗಿ ರೈತರಿಗೆ ನ್ಯಾಯವಾದ ಬೆಲೆಯನ್ನು ಕೊಡಬಹುದು.

ಶ್ರೀ ಜೆ. ಎಚ್ ಪಟೇಲ್.—ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಪ್ರತಿಯೊಂದು ಕಾರ್ಖಾನೆಗಳಿಗೂ ತನ್ನದೇ ಆದ ಭಾರ ಇದೆ. ಯಾವ ಕಾರ್ಖಾನೆ ಇಷ್ಟು ಹೆಚ್ಚು ಕೊಡುವುದಕ್ಕೆ ಸಾಧ್ಯತೆ ಇದೆಯೋ ಅಂತಹವರು, ಅದನ್ನು ಬೇರೆ ರೀತಿಯಲ್ಲಿ ಸಾಗಾಣಿಕೆ ಚಾರ್ಜಸ್, ಹಾಗೂ ಕಟ್ಟಿಂಗ್ ಚಾರ್ಜಸ್ ಎಂದು ಕೊಡಬಹುದು ಆದರೆ ಆ ರೀತಿ ಕೊಡುವುದಕ್ಕೆ ಶಕ್ತಿ ಇರಬೇಕಲ್ಲಾ. ಕೊಡ್ರಿ ಅಂತ ಹೇಳಿದರೆ ಕಾರ್ಖಾನೆಗಳು ಮುಚ್ಚಿ ಹೋಗುತ್ತವೆ ಅದಕ್ಕೋಸ್ಕರ ಸರ್ಕಾರ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು. ಷೆಷ್ಟೇ ಕ್ಯಾಲಿಕ್ಯುಲೇಟ್ ಮಾಡಿದರೂ ೧೦.೫ ಹಾಗೂ ೧೦.೬ ರಿಕವರಿ ಇದ್ದರೂ ೨೮೫ ರೂಪಾಯಿಗಳನ್ನು ಕೊಡುವುದಕ್ಕೆ ಬರುವುದಿಲ್ಲ ಆದರೂ ರೈತರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ೨೮೫ ರೂಪಾಯಿಗಳೆಂದು ನಿಗದಿ ಮಾಡಿದ್ದೇವೆ. ಕಳೆದ ೨-೩ ವರ್ಷಗಳಿಂದ ಅವರು ಚೆನ್ನಾಗಿ ಕೆಲಸ ಮಾಡಿದ್ದು ಹೆಚ್ಚು ಲಾಭ ಬಂದಿದ್ದರೆ, ಇನ್ನೂ ೧೦ ರೂಪಾಯಿಗಳನ್ನು ಜಾಸ್ತಿ ಕೊಡಿ ಎಂದು ಹೇಳಿದ್ದೇವೆ. ಆ ಮೇಲೆ ೨೮೫ ರೂಪಾಯಿಗಳನ್ನು ಕೊಡುತ್ತಿದ್ದವರನ್ನು ನೀವು ೪೦೦ ರೂಪಾಯಿಗಳನ್ನು ಕೊಡಬೇಡಿ ಎಂದು ಹೇಳಿಲ್ಲ. ಆದರೆ ೨೮೫ ರೂಪಾಯಿಗಳಿಗಿಂತ ಕಡಿಮೆ ಯಾರೂ ಕೊಡಬೇಡಿ ಎಂದು ಹೇಳಿದ್ದೇವೆ.

ಶ್ರೀ ಪುಲ್ಲಾರಿಗೌಡ ಎಸ್. ಪಾಟೀಲ್.—ರಾಜ್ಯದಲ್ಲಿ ಇರತಕ್ಕ ಹಲವಾರು ಸಹಕಾರಿ ಸಕ್ಕರೆ ಕಾರ್ಖಾನೆಗಳು ಈಗಾಗಲೇ ಹಾನಿ ಮಾಡಿವೆ ಎನ್ನತಕ್ಕ ಅಭಿಪ್ರಾಯ ಇದೆ. ಅದಕ್ಕೋಸ್ಕರ ಸಚಿವ ಸಂಪುಟದ ಉಪ ಸಮಿತಿಯನ್ನು ಕೂಡ ಇದರ ಬಗ್ಗೆ ಪರಿಶೀಲನೆ ಮಾಡಲು ನೇಮಿಸಲಾಗಿತ್ತು. ಆ ಸಚಿವ ಸಂಪುಟದ ಉಪ ಸಮಿತಿಯ ತನ್ನ ವರದಿಯನ್ನು ಕೊಟ್ಟಿದೆಯೇ ಎಂಬುದು ಈ ಸದನಕ್ಕೂ ಗೊತ್ತಾಗಲಿಲ್ಲ ಮತ್ತೆ ಮಾನ್ಯ ಶಂಕರಿಕೊಪ್ಪನವರು ಪಾಧ್ಯಂತರ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದು, ಅದರಲ್ಲಿ ಕರ್ನಾಟಕದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳಲ್ಲಿ ಲಕ್ಷಾನು ಆಗುತ್ತಿರುವುದರಿಂದ ಅಲ್ಲಿರತಕ್ಕ ಹಳೆಯ ಮೆಷನರಿಗಳೇ ಕಾರಣ ಎಂಬುದಾಗಿ ವರದಿಯಲ್ಲಿ ತಿಳಿಸಿದ್ದಾರೆಂದು ಕೇಳಿದ್ದೇನೆ. ಆವರು ಆ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇ ಆದರೆ ಇದು ಸರಿಯಾದಂತಹ ಅಭಿಪ್ರಾಯವಲ್ಲ. ಇದು ಇತ್ತೀಚೆಗೆ ಪ್ರಾರಂಭವಾದ ಸಕ್ಕರೆ ಕಾರ್ಖಾನೆಗಳಲ್ಲೂ ಅಳವಡಿಸಲಾಗಿರುವ ಮೆಷನರಿಗೂ ಕೂಡ ೩೦ ವರ್ಷಗಳ ಹಿಂದೆ ಪ್ರಾರಂಭವಾದಂತಹ ಸಕ್ಕರೆ ಕಾರ್ಖಾನೆಗಳಲ್ಲಿ ಅಳವಡಿಸಲಾಗಿರುವಂತಹ ಮೆಷನರಿಗಳೇ ವ್ಯತ್ಯಾಸವಷ್ಟಲ್ಲೂ ಕೂಡ ಅವೇ ಇವೆ. ನಮ್ಮಲ್ಲೂ ಕೂಡ ಅವೇ ಇವೆ. ಅಲ್ಲಿ ಈ ರೀತಿಯ ಹಾನಿಯಾಗುತ್ತಿರುವುದಕ್ಕೆ ಕಾರಣ ಅಲ್ಲಿರತಕ್ಕ ಮಿಸ್ ಮ್ಯಾನೇಜ್‌ಮೆಂಟ್. ಮತ್ತೆ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದ ಮೇಲೆ ಆ ಕ್ಷೇತ್ರದಲ್ಲಿ ಕಡ್ಡಾಯವಾಗಿ ಕಬ್ಬನ್ನು ಬೆಳೆಸತಕ್ಕ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಆ ಆದೇಶವನ್ನು ನೀವು ಕೊಡುವುದಿಲ್ಲ. ಬೇರೆ ಕ್ಷೇತ್ರದಿಂದ ಕಬ್ಬು ತಂದು ನಮ್ಮಲ್ಲಿ ಅರೆಯುವುದು ನಿಮ್ಮ ಕಬ್ಬನ್ನು ಬೇರೆ ಕಡೆ ಅರೆಯುವುದು ಇರುವುದರಿಂದ ಇದಕ್ಕೆಲ್ಲಾ ಕಾರಣವಾಗಿದೆ ಎಂದು ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಇದಕ್ಕೆ ಉತ್ತರ ಏನು ಹೇಳೋಣ? ಸಹಕಾರಿ ವಲಯದಲ್ಲಿ ಬಹಳ ಕಾರ್ಖಾನೆಗಳು ದಿವಾಳಿ ಸ್ಥಿತಿಯಲ್ಲಿ ಇವೆ. ಇದು ಏಕೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಮಿಸ್ ಮೇನೇಜ್‌ಮೆಂಟ್ ಇರಬಹುದು, ಮೆಕ್ಯಾನಿಕಲ್ ರೀಸನ್ಸ್ ಇರಬಹುದು. ಅಥವಾ the standard or the quality of the cane also depends. ಆದ್ದರಿಂದ ಎಲ್ಲಾದಕ್ಕೂ ಒಂದೇ ಮಾತ್ರ ಹೇಳುವುದಕ್ಕಾಗುವುದಿಲ್ಲ. ಆಯಾ ಏರಿಯಾದಲ್ಲಿ ಇರುವ ಕಬ್ಬು, ಮೆಷಿನರಿ ಮತ್ತು ಮೇನೇಜ್‌ಮೆಂಟ್ ಚೆನ್ನಾಗಿ ಆದಾಗ ಇವೂ ಕೂಡಾ ಚೆನ್ನಾಗಿ ಆಗುತ್ತವೆ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಹಾಗೂ ಜಾಯಿಂಟ್ ಸೆಕ್ಟಾರ್‌ನಲ್ಲಿ ಇರುವುದರಿಂದ ನಾವು ಅಡ್ವೈಸ

ಮಾಡಬಹುದು. ಕ್ಯಾಬಿನೆಟ್ ಸಬ್ ಕಮಿಟಿಯ ವರದಿ ಇವರಿಗೆ ಕೊಡುವುದಕ್ಕೆಲ್ಲ, ಸರ್ಕಾರಕ್ಕೆ ಕೊಡುವುದಕ್ಕೆ ಇರುವುದು.

ಶ್ರೀ ಎಂ. ಎಸ್ ಪಾಟೀಲ್.—ನಮಗೆ ಕೊಡಿ ಎಂದು ಹೇಳಿಲ್ಲ. ಅವರು ಏಕೆ ಹೀಗೆ ಜೇಷ್ಟೆ ಮಾಡಿ ಹೇಳುತ್ತಾರೆ? ನಮಗೆ ಕೊಡುವುದಕ್ಕಾಗುವುದಿಲ್ಲ ಎಂದರೆ ಹೇಗೆ ದಯಮಾಡಿ ಈ ರೀತಿ ಮಾನ್ಯ ಹಿರಿಯ ಸಚಿವರು ಮಾತನಾಡುವುದು. ಅವರು ಸರಿಮಾಡಿಕೊಳ್ಳಬೇಕು.

ಶ್ರೀ ಜೆ. ಎಚ್. ಪಟೇಲ್.—ಕಬ್ಬನ್ನು ಬಿಟ್ಟು ಅವರು ಕ್ಯಾಬಿನೆಟ್ ಸಬ್ ಕಮಿಟಿಗೆ ಹೋದರು. ಅದನ್ನು ಕೊಡುವ ಅವಶ್ಯಕತೆ ಇಲ್ಲ ಎಂದು ಹೇಳಿದೆ. Government has its own authority to keep whatever report it wants. ನಾನು ರೂಲ್ಸ್ ಪ್ರಕಾರ ಹೇಳಿದ್ದುದು. ನಿಮಗೆ ಎಂದರೆ ಇಂಡಿವಿಜ್ಯುಯಲ್ಲಾಗಿ ಅಲ್ಲ. ಇಡೀ ಭಾರತದಲ್ಲೇ ಸಕ್ಕರೆ ಉದ್ಯಮದ ಬಗ್ಗೆ ವಿಚಿತ್ರವಾದ ಸ್ಥಿತಿ ಇದೆ ಮಹಾರಾಷ್ಟ್ರದಲ್ಲಿ ಮತ್ತು ವಿಶೇಷವಾಗಿ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಈ ಕಾರ್ಖಾನೆಗಳು ಈಗ ಚೆನ್ನಾಗಿ ಕೆ ಸ ಮಾಡುತ್ತಿವೆ. ಒಂದು ಕಾಲದಲ್ಲಿ ಸಕ್ಕರೆಯಲ್ಲಿ ನಾರ್ದರನ್ ವರದೇ ಲಾಬಿ ಆಗಿತ್ತು. ಸದರನ್ ಫ್ಯಾಕ್ಟರೀಸ್‌ಗೆ ನ್ಯಾಯ ದೊರಕುತ್ತಾ ಇರಲಿಲ್ಲ. ಇತ್ತೀಚೆಗೆ ಇದು ಬರುತ್ತಾ ಇದೆ. ಶಂಕರೀಕೊಪ್ಪ ಸಲಹೆಗಳನ್ನೂ ಸಹಾ ನಾವು ಗಮನಸದಲ್ಲಿಟ್ಟುಕೊಳ್ಳುತ್ತೇವೆ. ಪ್ರಶಿಯೊಂದು ಕಂಪೆನಿಗಳಲ್ಲಿ ತೊಂದರೆ ಏನು ಇದೆ ಅದರ ಬಗ್ಗೆ. ಮೆನಿಟ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಏಕಾಂತಯ್ಯ.—ಹಿರಿಯೂರಿನ ವಾಣಿವಿಲಾಸ ಸಕ್ಕರೆ ಕಾರ್ಖಾನೆಯನ್ನು ಬಳಕೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಆದರೆ ಇತ್ತೀಚೆಗೆ ಲೆನೇ ತಾರೀಖು ಸಹಕಾರಿ ಸಕ್ಕರೆ ಕಾರ್ಖಾನೆ, ನಿರ್ದೇಶಕರು ಮತ್ತು ಸಹಕಾರಿ ಇಲಾಖೆ ಅಧಿಕಾರಿಗಳು ಸಭೆ ಸೇರಿ ರೈತರು ೩-೪ ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯುತ್ತೇವೆಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಸಹಾಯ ಮಾಡಲು ವಾಣಿವಿಲಾಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಅಲ್ಲಿನ ರೈತರು ೪ ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆದು ಕೊಟ್ಟರೆ ನಾವು ಇದನ್ನು ಓಪನ್ ಮಾಡಿಕೊಡುತ್ತೇವೆ.

ಶ್ರೀ ಪಂಪಾಪತಿ.—ಮಾಜಿ ಸಹಕಾರ ಸಚಿವರು ಹೇಳಿದಂತೆ ವಾಣಿವಿಲಾಸ್ ಸಹಕಾರಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಗೆ ಒಳಪಡತಕ್ಕ ಪ್ರದೇಶದಲ್ಲಿ ಕೊಳವೆ ಬಾವಿಗಳು ಹೆಚ್ಚಾಗಿವೆ. ಅಲ್ಲಿರತಕ್ಕ ರೈತರು ೫೦ಮಾರು ೪ ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯಲು ತಯಾರಾ ಇದ್ದು ನೀವು ಬೆಳೆದು ಕೊಡಲಿ ಎಂದ ತಕ್ಷಣ ಅವರು ಬೆಳೆಯುವುದಕ್ಕಾಗುವುದಿಲ್ಲ. ಅವರ ಬೆಳೆಯ ಬೇಕಾದರೆ ಅವರಿಗೆ ಬೇಕಾದ ಪ್ರೋತ್ಸಾಹ ಧನವನ್ನು ತಾವು ಕೊಡಬೇಕಾಗುತ್ತದೆ. ಬೀಜ, ಗೊಬ್ಬರ ಹಾಗೂ ಮತ್ತಿತರ ಸೌಲಭ್ಯಗಳನ್ನು ಸರ್ಕಾರ ಒದಗಿಸಿದರೆ ಅವರು ಬೆಳೆಯುತ್ತಾರೆ. ಇದರಿಂದ ಅಲ್ಲಿರತಕ್ಕ ರೈತಕಾರ್ಮಿಕರಿಗೂ ಅನುಕೂಲವಾಗುತ್ತದೆ. ಆದ್ದರಿಂದ ದಯಮಾಡಿ ಈ ಬಗ್ಗೆ ಅವರಿಗೆ ಬೇಕಾದ ಪ್ರೋತ್ಸಾಹ ಅನುಕೂಲಗಳನ್ನು, ಬೀಜ ಗೊಬ್ಬರಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇವತ್ತು ಅಲ್ಲಿನ ರೈತರಿಗೆ ಬೀಜ ಗೊಬ್ಬರದ ಕೊರತೆ ಇಲ್ಲ ಅಲ್ಲಿರುವುದು ನೀರಿನ ಕೊರತೆ ಡ್ಯಾಮ್‌ನಲ್ಲಿ ನೀರು ಇಲ್ಲ. ಈ ವರ್ಷದಷ್ಟಾದರೂ ಎಷ್ಟು ನೀರು ಸಂಗ್ರಹವಾಗಬೇಕೋ ಅಷ್ಟು ನೀರು ಸಂಗ್ರಹವಾಗಿಲ್ಲ. ಕೇವಲ ಬೀಜ. ಗೊಬ್ಬರಕ್ಕೋಸ್ಕರ ಅವರು ಬೆಳೆಯುತ್ತಿಲ್ಲ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ ಆದ್ದರಿಂದಲೇ ಈಗಿರತಕ್ಕ ಹಾಗೂ ಬರ ಬೇಕಾಗಿರತಕ್ಕ ಕಬ್ಬಿನ ಆಧಾರದ ಮೇಲೆ ಓಪನ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದೆ ಇನ್ನೊಂದು ಪ್ರಾಜೆಕ್ಟ್ ಬೇರೆ ಇತ್ತು.

ವರ್ಲ್ಡ್ ಬ್ಯಾಂಕ್ ಹಣವನ್ನು ತಂದು ಬಾವಿಗಳನ್ನು ತೆಗೆದು ಇರಿಗೇಷನ್ ಪಂಪ್‌ಗಳನ್ನು ಅಳವಡಿಸಬೇಕೆನ್ನುವ ಪ್ರಾಜೆಕ್ಟ್ ಇತ್ತು ಅದು ಆಗುವ ಸ್ಥಿತಿಯಲ್ಲಿಲ್ಲ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ನಾನು ಉತ್ಸಾಹಿಯಾಗಿದ್ದೇನೆ ಆದರೆ ಕಬ್ಬು ಇಲ್ಲದೆ ಎಷ್ಟೋ ಕಾರ್ಖಾನೆಗಳು ಮುಚ್ಚಿವೆ. ಕಳೆದ ಎರಡು ಮೂರು ವರ್ಷಗಳಿಂದ ಕಾರ್ಖಾನೆಗಳಿಗೆ ಕೆಲಸವಿಲ್ಲ. ಕೆಲಸ ಮಾಡುವ ಸ್ಥಿತಿಗೆ ಬಂದರೆ ರೈತರಿಗೆ ಯಾವರೀತಿಯ ಸಹಕಾರ ಕೊಡಬೇಕಾಗಿದೆಯೋ ಅದನ್ನು ಸರ್ಕಾರ ಕೊಡುತ್ತದೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳು ಕಬ್ಬು ಬೆಳೆಯಲಿಕ್ಕೆ ರೈತರಿಗೆ ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆಂದು ಒಂದು ಘೋಷಣೆ ಮಾಡಿ. ಆಗ ಜನ ನಿಮಗೆ ಅಹವಾಲನ್ನು ಸಲ್ಲಿಸುತ್ತಾರೆ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಟ್ಟಿದ್ದೇನೆ. ನೀವು ಈ ರೀತಿ ಬಂಧ್ಯೆ ಎದ್ದು ಮಾತನಾಡಿದರೆ ಹೇಗೆ ? ನಿಮಗೆ ಅವಕಾಶ ಕೊಟ್ಟಿದ್ದೆ ತಪ್ಪು ಅನಿಸುತ್ತದೆ.

ಶ್ರೀ ಜೆ.ಹೆಚ್. ಪಟೀಲ್.—ನನಗೂ ಇಚ್ಛೆ ಇದೆ ಸಾಧ್ಯತೆ ಹಾಗೂ ಇಚ್ಛೆಗೆ ವ್ಯತ್ಯಾಸವಿದೆ.

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ ಕಬ್ಬಿನ ಬೆಲೆಯನ್ನು ನಿಗದಿ ಮಾಡುವಾಗ ಒಂದು ಟನ್ ಕಬ್ಬಿಗೆ ೧೦ ರೂಪಾಯಿಗಳನ್ನು ಹೆಚ್ಚಿಗೆ ಮಾಡಿದರು. ಸಾರಿಗೆ ವೆಚ್ಚ ಹೆಚ್ಚಾಗಿದೆ. ಕಳೆದ ವರ್ಷ ಒಂದು ಟನ್ ಕಬ್ಬಿಗೆ ಏನು ಸಾರಿಗೆ ವೆಚ್ಚವನ್ನು ಕೊಡುತ್ತಿದ್ದರು, ಈ ವರ್ಷ ೧೫ ರೂಪಾಯಿಗಳನ್ನು ರೈತರು ಪೆಚ್ಚಿಗೆ ಭರಿಸಬೇಕಾಗಿದೆ. ಒಂದು ಟನ್ ಕಬ್ಬಿಗೆ ೧೦ ರೂಪಾಯಿ ಜಾಸ್ತಿ ಮಾಡಿದರೆ ರೈತರಿಗೆ ಅನುಕೂಲವಾಗುವುದಿಲ್ಲ. ಒಂದು ಟನ್ ಕಬ್ಬಿನ ಬೆಲೆ ೨೮೫ ಇದ್ದದನ್ನು ೩೦೦ ರೂಪಾಯಿ ಮಾಡಿದರು. ಅದರಿಂದ ಅನುಕೂಲವಾಗಿಲ್ಲವೆನ್ನುವುದನ್ನು ಮಾನ್ಯ ಸಚಿವರು ಒಪ್ಪುತ್ತಾರೆ ಮತ್ತೊಂದು ವಿಚಾರ ವೇನೆಂದರೆ ಮೊಲ್ಯಾಸಸ್ ಖರೀದಿ ಮಾಡುವ ಬೆಲೆಯನ್ನು ಕೇಂದ್ರಸರ್ಕಾರದವರು ನಿಗದಿ ಮಾಡಿದ್ದಾರೆ. ಮಾರ್ಕೆಟ್‌ನ ಬೆಲೆಗೂ ಕೇಂದ್ರಸರ್ಕಾರದವರು ನಿಗದಿ ಮಾಡಿರುವ ಬೆಲೆಗೂ ಬಹಳ ಅಂತರವಿದೆ. ಆದ್ದರಿಂದ ಕಾರ್ಖಾನೆಯವರು ಶೇಕಡ ೫೦ರಷ್ಟು ಮೊಲ್ಯಾಸಸ್ ಅನ್ನು ಮಾರಾಟ ಮಾಡುವುದಕ್ಕೆ ಪರವಾನಗಿ ಕೊಡಿಸುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೀಲ್.—ಒಂದು ಟನ್ ಕಬ್ಬಿನ ಬೆಲೆಯನ್ನು ೩೦೦ ರೂಪಾಯಿ ಏತಕ್ಕೆ ನಿಗದಿ ಮಾಡಲಿಲ್ಲವೆನ್ನುವುದನ್ನು ನಾನು ಪುನಃ ಪುನಃ ಹೇಳಿದ್ದೇನೆ. ಓ.ಖಿ ರಿಕವರಿ ೧೦% ಎಂದು ಏನಿದೆ ಅದನ್ನು ಲೆಕ್ಕಾಚಾರ ಮಾಡಿ ಸರ್ಕಾರಕ್ಕೆ ಬರಬೇಕಾದ ಟ್ಯಾಕ್ಸ್‌ನಲ್ಲಿ ೧೮ ಏನಿದೆ ಅದರಲ್ಲಿ ೧೨ ರೂಪಾಯಿಗಳನ್ನು ರೈತರಿಗೆ ಕೊಡುತ್ತಿದ್ದೇವೆ ಇಷ್ಟೆಲ್ಲಾ ಮಾಡಿದರೂ ಕೆಲವು ಕಾರ್ಖಾನೆಗಳು ನಡೆಯುವ ಸ್ಥಿತಿಯಲ್ಲಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿದೆ ಅವರದು ಕಾರ್ಖಾನೆ ಇದೆ. ಒಂದು ವರ್ಷಕ್ಕೆ ೬೫ ಸಾವಿರ ಟನ್ ಕಬ್ಬನ್ನು ಅರೆದರೆ ಆ ಕಾರ್ಖಾನೆಗಳು ಬದುಕುತ್ತವೆಯೇ ? ಒಂದು ವರ್ಷಕ್ಕೆ ಒಂದೂವರೆ ಲಕ್ಷ ಟನ್ ಕಬ್ಬನ್ನು ಅರೆಯಬೇಕು ಒಂದು ದಿವಸಕ್ಕೆ ೧೫೦ ಟನ್ ಕಬ್ಬನ್ನು ಅರೆಯಬೇಕು, ವರ್ಷಕ್ಕೆ ಒಂದೂವರೆ ಲಕ್ಷ ಟನ್ ಕಬ್ಬನ್ನು ಅರೆದರೆ ಅಂತಹ ಕಾರ್ಖಾನೆಗಳು ಮಯಬಲ್ ಮಾನ್ಯಸದಸ್ಯರುಗಳು ಯಾವುದೇ ಪಕ್ಷದವರು ಇರಬಹುದು, ರೈತರ ಬಗ್ಗೆ ಎಲ್ಲರಿಗೂ ಆಸೆ ಇಚ್ಛೆ ಇರುತ್ತದೆ.ರೈತರು ಕಬ್ಬನ್ನು ಸಪ್ಲೈ ಮಾಡುತ್ತಾರೆ. ಹೊಸ ಹುರುಪಿನಲ್ಲಿ ೩೦೦ ರೂಪಾಯಿ ಕೊಡಿಯೆಂದು ಹೇಳಬಹುದು. ಆದರೆ ಮೂರು ವರ್ಷಕ್ಕೆ ಆ ಕಾರ್ಖಾನೆ ನಿಂತು ಹೋಗುತ್ತದೆ.

ಶ್ರೀ ಆರ್. ರಾಮಯ್ಯ.—ಮಾನ್ಯ ಮಂತ್ರಿಗಳು ಆ ಭಾಗದಲ್ಲಿ ನೀರಿಲ್ಲ ಕಬ್ಬನ್ನು ಬೆಳೆಯಲಿಕ್ಕೆ ಆಗುತ್ತಿಲ್ಲವೆಂದು ಹೇಳಿದರು. ಇತ್ತೀಚೆಗೆ ಸಕ್ಕರೆ ಕಾರ್ಖಾನೆಯ ಮ್ಯಾನೇಜ್‌ಮೆಂಟನ್ನು ಬದಲಾಯಿಸಿ, ಆಲ್ಲೊಂದು ಹೊಸ ಕಮಿಟಿಯನ್ನು ನೇಮಿಸಿದ್ದಾರೆ ಆ ಹೊಸ ಕಮಿಟಿಯವರು ರೈತರಿಗೆ ನೋಟೀಸ್ ಕೊಡುತ್ತಿದ್ದಾರೆ. ಏನೆಂದರೆ ರೈತರಿಗೆ ಬೀಜ, ಗೊಬ್ಬರ ಕೊಡುತ್ತೇವೆ ಕಬ್ಬನ್ನು ಬೆಳೆಯಿರಿ ಎಂದು ಹೇಳುತ್ತಿದ್ದಾರೆ. ರೈತರು ಬಾಡಪಾಳ ಹಾಕಿದ್ದಾರೆ, ರೈತರ ಷೇರುಗಳಿವೆ, ರೈತರು ಸಾಲಗಾರರಾಗಿದ್ದಾರೆ ಇಂತಹ ಉದ್ಯೋಗಗಳನ್ನು ಮಾಡಿಚ್ಚಿದರೆ ಅವರಮೇಲೆ ಡಿಪೆಂಡ್ ಆಗಿರತಕ್ಕ ನೌಕರರೂ ಏನಿದ್ದಾರೆ ಅವರಿಗೆ ರೈತರಿಗೂ ತೊಂದರೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಒಂದು ಹೊಸ ಯೋಜನೆಯನ್ನು ಹಾಕಿಕೊಂಡು ಮುನ್ನೂರಲ್ಕ ಸಾವಿರ ಎಕರೆಗಳಲ್ಲಿ ಕಡ್ಡಾಯವಾಗಿ ಕಬ್ಬನ್ನು ಬೆಳೆಯುವಂತಹ ವ್ಯವಸ್ಥೆಯನ್ನು ಮಾಡದಿದ್ದರೆ ತೊಂದರೆಯಾಗುತ್ತದೆಂದು ಹೇಳುತ್ತೇನೆ.

೧೧–೫೦ ಎ.ಎಂ.

ಶ್ರೀ ಜೆ.ಹೆಚ್. ಪಟೀಲ್.—ಕಬ್ಬು ಬೆಳೆಯದಿದ್ದರೆ ತೊಂದರೆಯಾಗುತ್ತದೆನ್ನುವುದನ್ನು ನಾನೂ ಹೇಳುತ್ತಿದ್ದೇನೆ ಕಬ್ಬನ್ನು ಬೆಳೆಯುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ೪ ಸಾವಿರ ಬೋರ್‌ವೆಲ್‌ಗಳನ್ನು ತೋಡುವ ಪ್ರಾಜೆಕ್ಟ್ ಪರ್ಲ್‌ದ್‌ಬ್ಯಾಂಕಿಗೆ ಹೋಗಿತ್ತು ಅದು ಇನ್ನೂ ಆಗಿಲ್ಲ. ಸಕ್ಕರೆ ಕಾರ್ಖಾನೆಗೆ ಅತ್ಯಾವಶ್ಯಕವಾಗಿ ಬೇಕಾಗಿರುವುದು ಕಬ್ಬು ಅದರಿಂದ ಕಷ್ಟವಾಗಿದೆ. ಮಾನ್ಯ ಸದಸ್ಯರಾದ ಏಕಾಂತಯ್ಯನವರು ಮುಂಚ್ಚಿರುವ

ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಮಾನ್ಯ ಮಂತ್ರಿಮಹೋದಯರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಹೇಳುವುದಾದರೆ ಒಂದೆರಡು ಕಾರ್ಖಾನೆಗಳು ಏತಕ್ಕೆ ರಾಜ್ಯದಲ್ಲಿರತಕ್ಕ ಅನೇಕ ಸಕ್ಕರೆ ಕಾರ್ಖಾನೆಗಳ ಸ್ಥಿತಿಯನ್ನು ನೋಡಿದಾಗ, ಮಹಾರಾಷ್ಟ್ರಕ್ಕಿಂತ ನಾವು ಕೆಳದರ್ಜೆಯಲ್ಲಿದ್ದೇವೆ. ಈ ಕಾರ್ಖಾನೆಗೆ ಕಬ್ಬು ಇಲ್ಲವೆಂದು ಹೇಳುತ್ತಿದ್ದಾರೆ ಅನೇಕ ಕಡೆಗೆ ರೈತರು ಬೆಳೆದಂತಹ ಕಬ್ಬನ್ನು ಕ್ರಷ್ ಮಾಡಲಿಕ್ಕೆ ಕಾರ್ಖಾನೆಯವರು ತೆಗೆದುಕೊಳ್ಳುತ್ತಿಲ್ಲ ಮಾನ್ಯ ಅಧ್ಯಕ್ಷರೇ, ಸಹಕಾರಿ ವಲಯಗಳಲ್ಲಿ ಕೆಲವು ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತಿವೆ ಎಂದು ತಮಗೆ ಗೊತ್ತು ನಿಮ್ಮಪರನ್ನೇ ಡೈರೆಕ್ಟರ್ ಆಗಿ ಹಾಕುತ್ತೀರಿ ಎಂದು ಹೇಳಿದರು. ಸಹಕಾರಿ ವಲಯದಲ್ಲಿ ನನಗಿಂತ ಅವರಿಗೆ ಚೆನ್ನಾಗಿ ಅರ್ಥವಾಗಿದೆ. ಅವರ ಸರ್ಕಾರ ಇದ್ದಾಗ ಹೇಗೆ ಮಾಡುತ್ತಿದ್ದರೋ, ನಮ್ಮ ಸರ್ಕಾರ ಇದ್ದಾಗ ಹಾಗೆಯೇ ಮಾಡುತ್ತಿದ್ದೇವೆ. ಕೆಲವು ಕಡೆ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತವೆ, ಕೆಲವು ಕಡೆ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುವುದಿಲ್ಲ ಇದನ್ನು I don't take it on party lines. ಎಲ್ಲೋ ಕೆಲವರು ಸಂಕೇಶ್ವರ ಷುಗರ್ ಫ್ಯಾಕ್ಟರಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಯಾರು ಯೋಗ್ಯ ಸಹಕಾರಿಯಾಗಿ ಇರುತ್ತಾನೆ, ಆ ಉದ್ದೇಶದಿಂದ ಇರುವವರು ಮಾತ್ರ ಉಳಿದುಕೊಂಡಿದ್ದಾರೆ ಅದಃಬಿಟ್ಟು ಏನೋ ಚೇರ್ಮನ್ ಆದೆ, ಬೋರ್ಡ್ ಮೆಂಬರ್ ಆದೆ ಎಂದರೆ ಎಲ್ಲೂ ಉಳಿದಿಲ್ಲ. ಈಗ ೧೪ ಸಕ್ಕರೆ ಕಾರ್ಖಾನೆಗಳಲ್ಲಿ ಐದಾರು ಅಥವಾ ನಾಲ್ಕು ಚೆನ್ನಾಗಿ ನಡೆಯುತ್ತಿವೆ ಇನ್ನು ಉಳಿದವು ಎಲ್ಲಾ ಲುಕ್ವಾಸಿನಲ್ಲಿವೆ. ಅದಕ್ಕೆ ಏನು ಕಾರಣವೆಂದು ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. Karnataka has better potential than Tamil Nadu or Andhra Pradesh. ನಮ್ಮ ಪೊಟೆನ್‌ಷಿಯಲ್‌ನಿಂದ ಹೆಚ್ಚು ಕಾರ್ಖಾನೆಗಳನ್ನು ನಡೆಸಬಹುದು. ಇನ್ನೂ ಚೆನ್ನಾಗಿ ನಡೆಸಬಹುದು ಅದಕ್ಕಾಗಿ ಕೇಂದ್ರಸರ್ಕಾರದ ಕಡೆಗೆ ಈ ಬಗ್ಗೆ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪರಾಹಿ ಯೋಜನೆಯಲ್ಲಿ ಬದಲಿ ರಸ್ತೆ ಮಾಡುವುದು,

೩೦೧೨ ಶ್ರೀ ಬಿ. ಸ್ವಾಮಿರಾವ್ (ಜೊಸನಗರ) ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಾಹಿ ಯೋಜನೆಯಲ್ಲಿ ಬದಲಿ ರಸ್ತೆ ವ್ಯವಸ್ಥೆಯಾಗಿದೆಯೇ ?

ಆ) ಯಡೂರು-ತೀರ್ಥಹಳ್ಳಿ ರಸ್ತೆಯಲ್ಲಿ ನೀರು ನಿಲ್ಲಿಸಲಾಗಿದೆಯೇ ? ಹಾಗಿದ್ದಲ್ಲಿ ಸಾರಿಗೆ ಸಂಪರ್ಕದ ವ್ಯವಸ್ಥೆ ಏನು ?

ಇ) ನೀರು ಶೇಖರಣೆ ಮಾಡಿಯೂ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿಲ್ಲದಿರುವುದು ನಿಜವೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಬದಲಿ ರಸ್ತೆ ವ್ಯವಸ್ಥೆಯಾಗಿದೆ. ಬದಲಿ ರಸ್ತೆ ನಿರ್ಮಾಣ ಕಾರ್ಯ ಲೋಕೋಪಯೋಗಿ ಇಲಾಖೆಯಿಂದ ನಡೆಯುತ್ತಿದೆ.

ಆ) ಮಾನ್ವಿ ಅಣೆಕಟ್ಟು ಜಲಾಶಯದಲ್ಲಿ ಭಾಗಶಃ ನೀರು ಶೇಖರಣೆಯಾಗಿರುವುದರಿಂದ ರಸ್ತೆಯ ಸ್ವಲ್ಪ ಭಾಗದಲ್ಲಿ ನೀರು ನಿಂತಿದೆ. ದೋಣಿ ಸಂಚಾರದ ವ್ಯವಸ್ಥೆ ಮಾಡಿದೆ. ಬಸ್ ವ್ಯವಸ್ಥೆ ಸಹ ಮಾಡಲಾಗಿದೆ.

ಇ) ಈ ವರ್ಷದ ಮುಂಗಾರು ಮಳೆಯಿಂದಾಗಿ ಭಾಗಶಃ ನೀರು ಶೇಖರಣೆ ಮಾಡಲಾಗಿದೆ. ಭೂಗರ್ಭ ವಿದ್ಯುದಾಗಾರವನ್ನು ೧೯೮೯ನೇ ಫೆಬ್ರುವರಿ ತಿಂಗಳಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು ಈಗ ಶೇಖರಣೆಯಾಗಿರುವ ನೀರನ್ನು ಮುಂದಿನ ಮಳೆಗಾಲದವರೆವಿಗೂ ವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯೋಗಿಸಲಾಗುವುದು.